ಓ.ಎಸ್. ನಂಬರ:-70 /2022

ಸಿ.ಡಬ್ಲೂ-:-1 : ಮಲ್ಲಿನಾಥ ತಂದೆ ವಿಜಯಕುಮಾರ ಮಾಶಾಳ

ದಿನಾಂಕ:- 23-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ *ಪಾಟೀ ಸವಾಲು : ಶ್ರೀ ಎಸ್ ಕೆ ಪಿ ವಕೀಲರಿಂದ :-*

ನಾನು ಪರಿಶೀಲಿಸಿದ ಮೂಲ ದಾಖಲೆಗಳ ಪ್ರತಿಗಳ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ವರದಿಯ ಜೊತೆಗೆ ಅವುಗಳನ್ನು ಸಲ್ಲಿಸಿರುತ್ತೇನೆ ಎನ್ನುತ್ತಾರೆ. ನಾನು ಹಾಜರುಪಡಿಸಿದ ಗ್ರಾಮ ನಕಾಶೆ ದಾಖಲೆಯಲ್ಲಿ ಎಕರೆ ಗುಂಟೆ ನಮೂದು ಇರುವುದಿಲ್ಲ. ನಾನು ಪೋಡಿ ಟಿಪ್ಪಣಿ ದಾಖಲೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಅದು ರದ್ದಾಗಿರುವುದರಿಂದ ನಾನು ಹಾಜರುಪಡಿಸಿರುವುದಿಲ್ಲ ಎನ್ನುತ್ತಾರೆ. ಆ ಕುರಿತು ರದ್ದಾದ ಬಗ್ಗೆ ನಾನು ನನ್ನ ವರದಿಯಲ್ಲಿ ತಿಳಿಸಿರುವುದಿಲ್ಲ. ಸಹದೇವಪ್ಪ ಕಾಶೀರಾಯರವರು ೭ ಎಕರೆ ೨೬ ಗುಂಟೆ ಸ್ವಾಧೀನದಲ್ಲಿರುವ ಕುರಿತು ನನ್ನ ವರದಿಯಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ. ಸದರಿ ೭ ಎಕರೆ ೨೬ ಗುಂಟೆಯಲ್ಲಿ ೩೩ ಗುಂಟೆ ರಸ್ತೆ ಇರುತ್ತದೆಂದೂ ಕೂಡಾ ನಾನು ತಿಳಿಸಿರುತ್ತೇನೆ ಎಂದರೆ ಸರಿ. ಸಾಗುವಳಿ ಎಂದು ತೋರಿಸಿದ ೬ ಎಕರೆ ೩೩ ಗುಂಟೆ ಜಮೀನಿನಲ್ಲಿ ೨ ಭಾಗಗಳು ಇರುತ್ತವೆ ಎಂದರೆ ಸರಿ. ಸದರಿ ೨ ಭಾಗಗಳ ಪಹಣಿಗಳೂ ಕೂಡಾ ಬೇರೆ-ಬೇರೆ ಇರುತ್ತವೆ ಎಂದರೆ ಸರಿ. ಅವುಗಳಲ್ಲಿ ಒಂದು ೬ ಎಕರೆ ೪ ಗುಂಟೆ ಜಮೀನಿನ

ಪಹಣಿ ಇರುತ್ತದೆ ಎಂದರೆ ಸರಿ. ಇನ್ನೊಂದು ಪಹಣಿ ೨೭ ಗುಂಟೆ ಜಮೀನಿನದು ಇರುತ್ತದೆ ಎಂದರೆ ಸರಿ. ಸಹದೇವಪ್ಪರವರ ೨ ಎಕರೆ ೩೯ ಗುಂಟೆ ವ್ಯತ್ಯಾಸವೆಂದು ತೋರಿಸಿದ ಜಮೀನಿನ ಚೆಕ್ಕುಬಂದಿಯನ್ನು ನಾನು ನನ್ನ ವರದಿಯಲ್ಲಿ ತೋರಿಸಿಲ್ಲ ಎಂದರೆ ಸರಿ. ಸಾಕ್ಷಿಯು ನಾನು ನಕ್ಷೆಯಲ್ಲಿ ಅದನ್ನು ಬಣ್ಣದಿಂದ ಅದನ್ನು ತೋರಿಸಿರುತ್ತೇನೆ ಎನ್ನುತ್ತಾರೆ.

೨. ಶರಣಪ್ಪರವರ ಮಕ್ಕಳಾದ ವಾದಿ ಮತ್ತು ಅವರ ಅಣ್ಣ-ತಮ್ಮಂದಿರಾದ ಜಮೀನಿನ ಪಹಣಿಗಳು ಬೇರೆ-ಬೇರೆ ಇರುತ್ತವೆ ಎಂದರೆ ಸರಿ. ನಾನು ಸದರಿ ಜಮೀನಿನ ಪ್ರಸ್ತುತ ಪಹಣಿಗಳನ್ನು ನೋಡಿರುತ್ತೇನೆ. ಅದು ೮ ಎಕರೆ ೨೮ ಗುಂಟೆ ಜಮೀನು ಇದೆ ಎಂದರೆ ಸರಿ. ರಸ್ತೆಗೆ ಜಮೀನು ಹೋಗಿ ಕೇವಲ ೧೯ ಎಕರೆ ೩೮ ಗುಂಟೆ ಜಮೀನು ಮಾತ್ರ ಸರ್ವೆ ನಂಬರ ೭೮ ರಲ್ಲಿ ಸಾಗುವಳಿಗೆ ಉಳಿದಿದೆ ಎಂದರೆ ಸರಿಯಲ್ಲ. ಸಾಕ್ಷಿಯು ೨೦ ಎಕರೆ ೨೫ ಗುಂಟೆ ಸಾಗುವಳಿಗೆ ಜಮೀನು ಉಳಿದಿದೆ ಎನ್ನುತ್ತಾರೆ.

೩. ನಾನು ನನ್ನ ವರದಿಯಲ್ಲಿ ಲಕ್ಷ್ಮಣರವರ ಅಣ್ಣತಮ್ಮಂದಿರ ಜಮೀನನ್ನು ಪ್ರತ್ಯೇಕವಾಗಿ ಎಷ್ಟು ಇರುತ್ತವೆ ಎಂದು ತೋರಿಸಿಲ್ಲ ಎಂದರೆ ಸರಿ. ನಮ್ಮ ಕಛೇರಿ ಮೂಲಕ ದಾಖಲೆಗಳನ್ನು ಪಡೆದಿರುತ್ತೇನೆ. ನ್ಯಾಯಾಲಯದ ಆದೇಶದಂತೆ ನಾನು ನಮ್ಮ ಕಛೇರಿಯ ಮೂಲ ದಾಖಲಗಳನ್ನು ಪಡೆದುಕೊಂಡು ಕಮೀಷನರ್ ಕೆಲಸ ಮಾಡಿದ ಕುರಿತು ನನ್ನ ವರದಿಯಲ್ಲಿ ತಿಳಿಸಿರುತ್ತೇನೆ. ನಾನು ಕಮೀಷನರ್ ವಾರೆಂಟ್ ಬಿಟ್ಟು ಬೇರೆ ದಾಖಲೆಗಳನ್ನು ನ್ಯಾಯಾಲಯದಿಂದ ಪಡೆದಿರುವುದಿಲ್ಲ.

೪. ನನ್ನ ಪಂಚನಾಮೆ ಮಾಡುವ ಸಮಯದಲ್ಲಿ ಗುರುಶಾಂತ ತಂದೆ ಶಾಂತಲಿಂಗಪ್ಪ ಮತ್ತು ಭೀಮಶಂಕರ ತಂದೆ ಗುಂಡುರಾಯ ಎಂಬ ಪಂಚರು ಇದ್ದರು, ಅವರು ತಾವಾಗಿಯೆ ಅಲ್ಲಿಗೆ ಬಂದಿದ್ದರು. ಅವರನ್ನು ಯಾರು ಕರೆದುಕೊಂಡು ಬಂದಿದ್ದರು ಎಂದು ನನಗೆ ಮಾಹಿತಿ ಇರುವುದಿಲ್ಲ. ಪಂಚನಾಮೆಯಲ್ಲಿ ಸದರಿ ಅಳತೆಯ ಪ್ರಕಕಾರ ರೋಡನ್ನು ಅಳತೆ ಮಾಡಿಲ್ಲವಾದ್ದರಿಂದ ತಕರಾರು ಎಂದು ಪಂಚನಾಮೆಯಲ್ಲಿ__ಸಹದೇವಪ್ಪರವರು ಸಹಿ ಮಾಡುವಾಗ ಬರೆದಿರುತ್ತಾರೆ. ನಾನು ಹೋದ ಸಮಯದಲ್ಲಿ ಸ್ವಲ್ಪ ಮಳೆಯಾಗಿ ಜಮೀನು ಹಸಿಯಾಗಿತ್ತು ಎಂದರೆ ಸರಿ. ಆ ಕಾರಣದಿಂದ ನಾನು ಸದರಿ ಜಮೀನಿನಲ್ಲಿದ್ದ ಮತ್ತೊಂದು ರಸ್ತೆಯನ್ನು ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸರ್ವೆ ನಂಬರ ೭೮ ರ ಜಮೀನಿನಲ್ಲಿ ಒಂದೆ ರಸ್ತೆ ಇರುತ್ತದೆ ಅದನ್ನು ಅಳತೆ ಮಾಡಿರುತ್ತೇನೆ ಎನ್ನುತ್ತಾರೆ.

೫. ನನ್ನ ವರದಿಯಲ್ಲಿ ನಾನು ಲಕ್ಷ್ಮಣರವರ ತಮ್ಮಂದಿರ ಹೆಸರು ಬರೆದಿಲ್ಲ ಎಂದರೆ ಸರಿ. ಲಕ್ಷ್ಮಣರವರ ತಮ್ಮಂದಿರ ಜಮೀನುಗಳು ಬೇರೆ-ಬೇರೆ ಇವೆ ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ೮ ಎಕರೆ ೨೮ ಗುಂಟೆ ಜಮೀನು ಒಟ್ಟಿಗೆ ಸ್ವಾಧೀನದಲ್ಲಿರುತ್ತಾರೆ ಎನ್ನುತ್ತಾರೆ. ಕಂದಾಯ ದಾಖಲೆಗಳಲ್ಲಿ ಲಕ್ಷ್ಮಣರವರ ತಮ್ಮಂದಿರ ಹೆಸರು ಬೇರೆ-ಬೇರೆಯಾಗಿ ಇರುತ್ತವೆ ಎಂದರೆ ಸಾಕ್ಷಿಯು ಪಹಣಿಯಲ್ಲಿ ಬೇರೆ-ಬೇರೆ ಇರುತ್ತವೆ ಎನ್ನುತ್ತಾರೆ. ನಾನು ಲಕ್ಷ್ಮಣರವರ ತಮ್ಮಂದಿರಿಗೂ ಕೂಡಾ ನೋಟಿಸು ನೀಡಿದ್ದೆ, ಅವರೂ ಕೂಡಾ ಬಂದಿದ್ದರು ಮತ್ತು ಅವರ ಸಹಿಯನ್ನೂ ಕೂಡಾ ಪಡೆದಿರುತ್ತೇನೆ.

೬. ನಿಡಿ-೧ ರಲ್ಲಿ ಲಕ್ಷ್ಮಣರವರ ತಮ್ಮಂದಿರಾದ ದತ್ತು ಮತ್ತು ಮಲ್ಲೇಶಪ್ಪರವರ ಹೆಸರಿನಲ್ಲಿ ಬೇರೆ-ಬೇರೆಯಾಗಿ ಜಮೀನು ಇರುವ ಕುರಿತು ಮುಟೇಷನನಲ್ಲಿ ನಮೂದು ಆಗಿರುತ್ತದೆ ಎಂದರೆ ಸರಿ. ನಾನು ಹಾಜರಿದ್ದವರ ಲಿಖಿತ ಹೇಳಿಕೆಗಳನ್ನು ಪಡೆದಿರುವುದಿಲ್ಲ. ಸಾಕ್ಷಿಯು ಪಂಚನಾಮೆಯಲ್ಲಿ ಅವರ ಸಹಿ ಪಡೆದಿರುತ್ತೇನೆ ಎನ್ನುತ್ತಾರೆ. ನಾನು ಲಕ್ಷ್ಮಣ ತಂದೆ ಶರಣಪ್ಪರವರ ಸ್ವಾಧೀನದಲ್ಲಿ ೮ ಎಕರೆ ೨೧ ಗುಂಟೆ ಜಮೀನು ಇರುವ ಕುರಿತು ಹಿತ್ತಾಳೆ ಬಣ್ಣದಲ್ಲಿ ಅವರ ಜಮೀನಿನ ನಕ್ಷೆಯಲ್ಲಿ ತೋರಿಸಿರುತ್ತೇನೆ. ನಾನು ನಕ್ಷೆಯಲ್ಲಿ ತೋರಿಸಿದ ರಸ್ತೆ ಸರಕಾರಿ ರಸ್ತೆ ಇರುತ್ತದೆ. ಅದನ್ನು ಎಲ್ಲರೂ ಉಪಯೋಗಿಸಬಹದು. ಪಂಚನಾಮೆಯ ಸಮಯದಲ್ಲಿ ಪಾರ್ವತಿ ಮತ್ತು ಸೋಮಶೇಖರವರಿಗೆ ನೋಟಿಸು ನೀಡಿದ್ದೆ ಆದರೆ ಅವರು ಬಂದಿರುವುದಿಲ್ಲ. ಪಾರ್ವತಿ ಮತ್ತು ಸೋಮಶೇಖರವರಿಗೆ ನೋಟಿಸು ಮುಟ್ಟಿದ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ ಆದರೆ ನೋಟಿಸು ಕಳುಹಿಸಿದ ಬಗ್ಗೆ ದಾಖಲೆ ನೀಡಿರುತ್ತೇನೆ.

೭. ಸರ್ವೆ ನಂಬರ ೭೮ ರಲ್ಲಿ ನಾನು ನಕ್ಷೆಯಲ್ಲಿ ತೋರಿಸಿದ ರಸ್ತೆಯನ್ನು ಬಿಟ್ಟು ಬೇರೆ ಯಾವುದೆ ರೆಸ್ತೆಗಳು ಅದರಲ್ಲಿ ಇರುವುದಿಲ್ಲ. ಪಾರ್ವತಿ ಮತ್ತು ಸೋಮಶೇಖರವರು ಗ್ರಾಮದ ಸೀಮೆ ಮೂಲಕ ತಮ್ಮ ಜಮೀನಿಗೆ ಹೋಗುತ್ತಾರೆ. ಅವರು ಹೋಗುವ ದಾರಿಯನ್ನು ನಾನು ನಕ್ಷೆಯಲ್ಲಿ ತೋರಿಸಿಲ್ಲ ಎಂದರೆ ಸರಿ. ಸರ್ವೆ ನಂಬರ ೭೮ ರಲ್ಲಿ ಕೇವಲ ೧ ಎಕರೆ ಜಮೀನು ರಸ್ತೆಗೆ ಹೋಗಿರುತ್ತದೆ. ಸರ್ವೆ ನಂಬರ ೭೮ ರಲ್ಲಿ ೧ ಎಕರೆ ಮತ್ತು ೨೭ ಗುಂಟೆ ಜಮೀನುಗಳು ರಸ್ತೆಗೆ ಹೋಗಿವೆ ಎಂದರೆ ಸರಿಯಲ್ಲ.

೮. ೧೯೬೫ ರಲ್ಲಿ ಗ್ರಾಮ ನಕ್ಷೆಯಲ್ಲಿ ರಸ್ತೆ ತೋರಿಸಿರುವುದರಿಂದ ನಾನು ೧೯೬೫ ರಲ್ಲಿ ರಸ್ತೆಗೆ ಒಂದು ಎಕರೆ ಜಮೀನು ಹೋದ ಕುರಿತು ತಿಳಿಸಿರುತ್ತೇನೆ. ಖಾಸರಾ ಪಹಣಿಗಳನ್ನು ನಾನೆ ನೋಡಿರುತ್ತೇನೆ. ನಾನು ನಮ್ಮ ಇಲಾಖೆಯ ಸರ್ವೆ ನಂಬರ ೭೮ ರ ಈಗಿನ ದಾಖಲೆಗಳನ್ನು ನೋಡಿರುತ್ತೇನೆ. ನಾನು ಸರ್ವೆ ಮಾಡುವ ಮೊದಲು ಸರ್ವೆ ನಂಬರ ೭೮ ರ ಜಮೀನು ಸರ್ವೆ ಆಗಿದ್ದ ಕುರಿತು ನನಗೆ ಮಾಹಿತಿ ಇರುವುದಿಲ್ಲ. ನಾನು ನ್ಯಾಯಾಲಯದಲ್ಲಿ ಸಲ್ಲಿಸಿದ ಮೇಮೋ ಆಫ್ ಇನ್ಸ್ಟ್ರಕ್ಷನ್ಸ ದಾಖಲೆಯನ್ನು ತೆಗೆದುಕೊಂಡು ಹೋಗಿರುವುದಿಲ್ಲ. ಮೇಮೋ ಆಫ್ ಇನ್ಸ್ಟ್ರಕ್ಷನ್ಸ ಪ್ರಕಾರ ನಾನು ಅಳತೆ ಮಾಡಿಲ್ಲ ಎಂದರೆ ಸಾಕ್ಷಿಯು ಅದರಲ್ಲಿ ರಸ್ತೆಯ ಬಗ್ಗೆ ಕೇಳಿದ್ದು, ಅದನ್ನು ತಿಳಿಸಿರುತ್ತೇನೆ ಎನ್ನುತ್ತಾರೆ. ಪಂಚನಾಮೆಯನ್ನು ಗಿಡದ ಕೆಳಗೆ ಕುಳಿತು ಮಾಡಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ಅಲ್ಲಿ ಯಾರೂ ಇರಲಿಲ್ಲ ಎಂದರೆ ಸರಿಯಲ್ಲ.

೯. ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ಸ್ಕೆಚ್ ನಕಾಶೆಯನ್ನು ಕಛೇರಿಯಲ್ಲಿ ತಯಾರು ಮಾಡಿರುತ್ತೇನೆ. ನಾನು ಸ್ಥಳದಲ್ಲಿ ಕಚ್ಚಾ ನಕ್ಷೆ ಮಾಡಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ನಾನು ಅಕ್ಕ-ಪಕ್ಕದ ಜಮೀನಿನವರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿ. ನಾನು ಯಾವ ವರ್ಷದ ಮೂಲ ದಾಖಲೆ ಪರಿಶೀಲಿಸಿರುತ್ತೇನೆ ಎಂದು ಬರೆದಿಲ್ಲ ಎಂದರೆ ಸರಿ. ಅಳತೆ ಸಮಯದಲ್ಲಿ ಮಳೆಯಾಗಿದ್ದರಿಂದ ನಾನು ಹೇಳಿದಂತೆ ಜಮೀನಿನ ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ.

೧೦. ಸರ್ವೆ ನಂಬರ ೭೮ ರಲ್ಲಿ ಸುತ್ತ-ಮುತ್ತ ಮುಳ್ಳು-ಕಂಟಿಗಳು ಇದ್ದವು ಎಂದರೆ ಸರಿ. ಅದರಲ್ಲಿ ಹೋಗಿ ಅಳತೆ ಮಾಡಲು ಆಗದ ಕಾರಣ ನಾನು ಅಳತೆ ಮಾಡದೆ ಅಂದಾಜಾಗಿ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಲಕ್ಷ್ಮಣರವರ ತಮ್ಮಂದಿರನ್ನು ಕರೆಯಿಸದೆ ಲಕ್ಷ್ಮಣರವರ ಮಾತುಕೇಳಿ ಅವರು ಹೇಳಿದಂತೆ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿದ್ದ ಸತ್ಯವನ್ನು ಪೂರ್ತಿಯಾಗಿ ನಾನು ವರದಿಯಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ನಾನು ಲಕ್ಷ್ಮಣರವರ ಮಾತುಕೇಳಿ ಒಂದು ಸುಳ್ಳು ವರದಿಯನ್ನು ಸಲ್ಲಿಸಿ, ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.